بسم اللهِ الرّحمٰنِ الرّحيم

ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09-09-2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:

ಹಝ್ರತ್ ಅಬೂಬಕರ್(ರ)ರ ಜೀವಿತದ ಕೆಲವು ಘಟನೆಗಳನ್ನು ನಾನು ಪ್ರಸ್ತಾಪಿಸುವೆನು. ಹಝ್ರತ್ ಅಬೂಬಕರ್(ರ)ರ ಮರಣದ ಸಮಯ ಸಮೀಪವಾದಾಗ, ಅವರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ)ರನ್ನು ಕರೆದು ಹಝ್ರತ್ ಉಮರ್(ರ)ರ ಕುರಿತು ಕೇಳಿದರು. ಅವರು ಹೇಳಿದರು: ಹೇ ರಸೂಲುಲ್ಲಾಹ್‌ರ ಖಲೀಫರೇ, ಅಲ್ಲಾಹನಾಣೆ, ಅವರು ನೀವು ಅಭಿಪ್ರಾಯಪಟ್ಟದ್ದಕಿಂತಲೂ ಶ್ರೇಷ್ಠರಾಗಿರುವರು; ಆದರೆ ಅವರ ಸ್ವಭಾವದಲ್ಲಿ ಕಾಠಿಣ್ಯವಿದೆ. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: "ನಾನು ಸೌಮ್ಯವಾಗಿ ವರ್ತಿಸುವ ಕಾರಣದಿಂದ ಅವರು ಕಠಿಣವಾಗಿ ವರ್ತಿಸುತ್ತಾರಷ್ಟೆ, ಅವರಿಗೆ ನೇತೃತ್ವ ಸ್ಥಾನ ಲಭಿಸುವಾಗ ಅವರು ತನ್ನ ಅನೇಕ ಸಂಗತಿಗಳನ್ನು ಬಿಟ್ಟುಬಿಡುವರು." ಅನಂತರ ಹಝ್ರತ್ ಅಬೂಬಕರ್(ರ) ಹಝ್ರರತ್ ಉಸ್ಮಾನ್(ರ)ರನ್ನು ಕರೆದು ಅವರೊಡನೆ ಹಝ್ರತ್ ಉಮರ್(ರ)ರ ಕುರಿತು ಕೇಳಿದರು. ಅವರು ಹೇಳಿದರು: "ಹಝ್ರತ್ ಉಮರರ ಅಂತರಂಗ ಅವರ ಬಹಿರಂಗಕ್ಕಿಂತ ಉತ್ತಮವಾದುದಾಗಿದೆ. ನಮ್ಮಲ್ಲಿ ಯಾರೂ ಅವರಂತೆ ಇಲ್ಲ." ಹಝ್ರತ್ ಅಬೂಬಕರ್(ರ) ಅವರಿಬ್ಬರೊಡನೆ ಹೇಳಿದರು: ನಾನು ನಿಮ್ಮೊಡನೆ ಹೇಳಿದ ಸಂಗತಿಗಳನ್ನು ಬೇರೆ ಯಾರೊಡನೆಯೂ ಹೇಳಬೇಡಿರಿ. ನಾನು ಉಮರ್‌ರನ್ನು ಬಿಟ್ಟುಬಿಡುವುದಾದರೆ, ಉಸ್ಮಾನ್‌ರಿಗೆ ಅಲ್ಲದೇ ಬೇರೆ ಯಾರನ್ನೂ ನಾನು ಆಯ್ಕೆ ಮಾಡಲಾರೆ. ನಿಮ್ಮ ಎಲ್ಲ ಕಾರ್ಯಗಳನ್ನು ನೋಡಲು ಅವರಿಗೆ ಅಧಿಕಾರವಿರುವುದು. ನಾನೀಗ ನಿಮ್ಮ ಕಾರ್ಯಗಳಿಂದ ಬಿಟ್ಟು ನಿಲ್ಲಲು ಮತ್ತು ಅಗಲಿ ಹೋದವರ ಜೊತೆಗೆ ಆಗಲು ಬಯಸುತ್ತೇನೆ.

ಹಝ್ರತ್ ಉಮರ್(ರ) ಖಲೀಫರಾಗುವುದರ ಬಗ್ಗೆ ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ತನಗಿರುವ ಆತಂಕ ವ್ಯಕ್ತಪಡಿಸಿದಾಗ ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನ ವಿಷಯದಲ್ಲಿ ನನ್ನನ್ನು ನೀವು ಹೆದರಿಸುತ್ತಿದ್ದೀರಾ? ನಾನು ಅಲ್ಲಾಹನನ್ನು ಭೇಟಿಯಾಗಿ ನನ್ನ ಪ್ರಭು ನನ್ನೊಡನೆ ಕೇಳಿದರೆ, ನಾನು ಅದಕ್ಕೆ ಉತ್ತರವಾಗಿ ಹೀಗೆ ಹೇಳುವೆನು: "ನಾನು ನಿನ್ನ ದಾಸರಲ್ಲಿ ಅತ್ಯಂತ ಶ್ರೇಷ್ಠನನ್ನು ನಿನ್ನ ದಾಸರ ಮೇಲೆ ಖಲೀಫರನ್ನಾಗಿ ಮಾಡಿರುವೆನು."

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸಮುದಾಯವು ಚುನಾವಣೆ ಮೂಲಕ ಆಯ್ಕೆ ಮಾಡಿದರೆ ಮಾತ್ರ ಯಾರಾದರೂ ಖಲೀಫರಾಗಬಹುದು ಎಂದಿರುವಾಗ ಹಝ್ರತ್ ಉಮರ್(ರ)ರನ್ನು ಹಝ್ರತ್ ಅಬೂಬಕರ್(ರ) ಏಕೆ ನೇಮಿಸಿದ್ದರು ಎಂದು ಪ್ರಶ್ನಿಸುವಿರಾದರೆ, ಅದಕ್ಕಿರುವ ಉತ್ತರವೇನೆಂದರೆ, ಹಝ್ರತ್ ಅಬೂಬಕರ್(ರ) ಹಝ್ರತ್ ಉಮರ್(ರ)ರನ್ನು ಸುಮ್ಮನೆ ನೇಮಿಸಿರಲಿಲ್ಲ. ಬದಲಾಗಿ ಅವರು ಸಹಾಬಿಯರಿಂದ ಸಲಹೆ ಕೇಳಿದ್ದಾಗಿ ತಿಳಿದುಬರುತ್ತದೆ. ಅನಂತರ ಅವರು ಮಸೀದಿಗೆ ಹೋದರು ಮತ್ತು ಜನರೊಡನೆ ಹೀಗೆ ಹೇಳಿದರು: ಎಲೈ ಜನರೇ, ನಾನು ಸಹಾಬಿಯರಿಂದ ಸಲಹೆ ಪಡೆದ ನಂತರ ನನ್ನ ಬಳಿಕ ಖಿಲಾಫತಿಗೆ ಹಝ್ರತ್ ಉಮರ್(ರ)ರನ್ನು ಇಷ್ಟಪಟ್ಟಿರುವೆನು. ನಿಮಗೂ ಅವರ ಖಿಲಾಫತ್ ಸಮ್ಮತವೇ? ಎಂದು ಕೇಳಿದರು. ಆಗ ಎಲ್ಲರೂ ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿಕೊಂಡರು. ಆದ್ದರಿಂದ ಇದು ಕೂಡ ಒಂದು ಪ್ರಕಾರದಲ್ಲಿ ಚುನಾವಣೆಯೇ ಆಗಿತ್ತು. ವ್ಯತ್ಯಾಸ ಇಷ್ಟು ಮಾತ್ರ, ಬೇರೆ ಖಲೀಫರನ್ನು ಖಲೀಫರ ನಿಧನದ ನಂತರ ಆಯ್ಕೆ ಮಾಡಲಾಗುತ್ತದೆ. ಹಝ್ರತ್ ಉಮರ್(ರ)ರನ್ನು ಹಝ್ರತ್ ಅಬೂಬಕರ್(ರ)ರ ಜೀವಿತದಲ್ಲೇ ಆಯ್ಕೆ ಮಾಡಲಾಯಿತು ಎಂಬುದು.

ತಾರೀಖ್ ತಬರಿಯಲ್ಲಿ ಹಝ್ರತ್ ಅಬೂಬಕರ್(ರ)ರ ರೋಗ ಮತ್ತು ಮರಣದ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಅಬೂಬಕರ್(ರ) ರೋಗಿಯಾಗಲು ಕಾರಣವೇನೆಂದರೆ, ಜಮಾದಿಲ್ ಆಖಿರ್ ದಿನಾಂಕ ಏಳು, ಸೋಮವಾರ, ಅವರು ಸ್ನಾನ ಮಾಡಿದ ಅಂದಿನ ದಿನದಂದು ತುಂಬಾ ಚಳಿಯಿತ್ತು. ಆದ್ದರಿಂದ ಅವರಿಗೆ ಜ್ವರಬಂತು. ಅದು 15 ದಿನಗಳ ತನಕವಿತ್ತು. ನಮಾಝಿಗಾಗಿ ಹೊರಗೆ ಬರಲು ಕೂಡ ಅವರಿಗೆ ಶಕ್ತಿಯಿರಲಿಲ್ಲ. ಹಝ್ರತ್ ಉಮರ್(ರ) ನಮಾಝಿಗೆ ಇಮಾಮತ್ ವಹಿಸುತ್ತಿರಲಿ ಎಂದು ಅವರು ಆಜ್ಞಾಪಿಸಿದರು. ಜನರು ಅವರ ಕ್ಷೇಮ ವಿಚಾರಿಸಲು ಬರುತ್ತಿದ್ದರು. ಆದರೆ ಅವರ ಆರೋಗ್ಯ ಕೆಡುತ್ತಾ ಹೋಯಿತು. ಆ ಕಾಲದಲ್ಲಿ ಹಝ್ರತ್ ಪೈಗಂಬರ್(ಸ) ನೀಡಿದ್ದ ಒಂದು ಮನೆಯಲ್ಲಿ ಹಝ್ರತ್ ಅಬೂಬಕರ್(ರ) ವಾಸಿಸುತ್ತಿದ್ದರು. ಅದು ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ)ರ ಮನೆಯ ಎದುರಿಗೆ ಇತ್ತು. ಹಝ್ರತ್ ಅಬೂಬಕರ್(ರ)ರ ರೋಗಾವಸ್ಥೆಯಲ್ಲಿ ಹೆಚ್ಚಾಗಿ ಹಝ್ರತ್ ಉಸ್ಮಾನ್(ರ) ಅವರ ಶುಶ್ರೂಷೆ ನಡೆಸುತ್ತಿದ್ದರು. ನೀವು ವೈದ್ಯರನ್ನು ಕರೆಯುವಿರಾದರೆ ಉತ್ತಮವಾಗಿರುವುದು ಎಂದು ಯಾರೋ ಅವರೊಡನೆ ಹೇಳಿದರು. ನೋಡಬೇಕಾದವನು ನನ್ನನ್ನು ನೋಡಿಯಾಗಿದೆ ಎಂದು ಅವರು ಹೇಳಿದರು. ಏನು ಹೇಳಿದರು ಎಂದು ಜನರು ಕೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: **"ಇನ್ನೀ ಅಫ್‌ಅಲು ಮಾ ಅಶಾಉ"** ಎಂದು ಅವನು ಹೇಳಿದನು. ಎಂದರೆ, ಅವರನ್ನು ಅಲ್ಲಾಹನ ಬಳಿ ಕರೆಯಲು ಈಗ ಅಲ್ಲಾಹನು ಬಯಸಿರುವನು ಮತ್ತು ಯಾವುದೇ ವೈದ್ಯನ ಆವಶ್ಯಕತೆಯಿಲ್ಲ ಎಂದಾಗಿತ್ತು ಅವರ ಮಾತಿನ ಉದ್ದೇಶ.

ಹಝ್ರತ್ ಅಬೂಬಕರ್(ರ) ಹಿಜರಿ 13ರ ಜಮಾದಿಲ್ ಆಖಿರ್ ದಿನಾಂಕ 22ರಂದು ಮಂಗಳವಾರ ಸಂಜೆ ತನ್ನ 63ನೇ ವಯಸ್ಸಿನಲ್ಲಿ ನಿಧನರಾದರು. ಅವರ ಖಿಲಾಫತ್ ಕಾಲಾವಧಿಯು 2 ವರ್ಷ, ಮೂರು ತಿಂಗಳು ಮತ್ತು ಹತ್ತು ದಿನಗಳು ಆಗಿದ್ದುವು. ಹಝ್ರತ್ ಅಬೂಬಕರ್(ರ)ರ ತುಟಿಯಿಂದ ಹೊರಟ ಕೊನೆಯ ವಾಕ್ಯವು ಪವಿತ್ರ ಖುರ್‌ಆನಿನ **"ತವಫ್ಫನೀ ಮುಸ್ಲಿಮನ್ ವ ಅಲ್‌ಹಿಖ್‌ನೀ ಬಿಸ್ಸಾಲಿಹೀನ್"** ಎಂಬ ಅನುಗ್ರಹೀತ ವಚನವಾಗಿತ್ತು. ಎಂದರೆ ಅನುಸರಣೆಯುಳ್ಳವನಾಗಿರುವ ಸ್ಥಿತಿಯಲ್ಲಿ ನನಗೆ ಮರಣವನ್ನು ನೀಡು ಮತ್ತು ನನ್ನನ್ನು ಸಾತ್ವಿಕರ ಸಂಘದಲ್ಲಿ ಸೇರಿಸು (ಸೂರಃ ಯೂಸುಫ್, ವಚನ 102). ಹಝ್ರತ್ ಅಬೂಬಕರ್(ರ)ರ ಉಂಗುರದಲ್ಲಿ

"ನಿಅ್‌ಮಲ್ ಖಾದಿರುಲ್ಲಾಹ್" ಎಂದು ಬರೆಯಲಾಗಿತ್ತು. ಎಂದರೆ, ಸರ್ವಶಕ್ತನಾದ ಅಲ್ಲಾಹನು ಅತ್ಯಂತ ಶ್ರೇಷ್ಠನು.

ಹಝ್ರತ್ ಅಬೂಬಕರ್(ರ) ಹೀಗೆ ಕೇಳಿದ್ದಾಗಿ ಹಝ್ರತ್ ಆಯಿಶ(ರ) ಹೇಳುತ್ತಾರೆ: ಬೇರೆ ಏನಾದರೂ ಬಾಕಿ ಉಳಿದಿಲ್ಲ ತಾನೇ? ಉಳಿದಿದ್ದರೆ, ಅದನ್ನು ಕೂಡ ಹಝ್ರತ್ ಉಮರ್‌ರಿಗೆ ಕಳುಹಿಸು. ದಫನ್ ಮಾಡುವುದರ ಮತ್ತು ಕಫನ್ ಹೊದಿಸುವುದರ ಬಗ್ಗೆ ಹೀಗೆ ಹೇಳಿದರು: ದೇಹದಲ್ಲಿರುವ ಈಗ ಇರುವ ಬಟ್ಟೆಯನ್ನು ತೊಳೆದು ಇತರ ಬಟ್ಟೆಗಳೊಂದಿಗೆ ಕಫನ್ ಹೊದಿಸಿರಿ. ಹಝ್ರತ್ ಆಯಿಶ(ರ) ಹೇಳಿದರು: ಇದಂತು ಹಳೆಯದ್ದು. ಕಫನ್‌ಗಾಗಿ ಹೊಸತು ಬೇಕಲ್ಲವೇ? ಅವರು ಹೇಳಿದರು: ಮೃತರಾದವರಿಗಿಂತ ಜೀವಂತ ವ್ಯಕ್ತಿಗಳು ಹೊಸ ಬಟ್ಟೆಗೆ ಹೆಚ್ಚು ಅರ್ಹರು.

ಹಝ್ರತ್ ಆಯಿಶ(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ)ರ ಪತ್ನಿಯಾದ ಅಸ್ಮಾ ಬಿನ್ತ್ ಉಮೈಸ್ ತನ್ನ ಸ್ನಾನವನ್ನು ಮಾಡಿಸಬೇಕೆಂದು ಅವರು ಉಯಿಲು ಮಾಡಿದ್ದರು. ಹಝ್ರತ್ ಅಬೂಬಕರ್(ರ)ರ ಪುತ್ರನಾದ ಹಝ್ರತ್ ಅಬ್ದುರ್ರಹ್ಮಾನ್ ಸ್ನಾನ ಮಾಡಿಸುವುದರಲ್ಲಿ ಅವರಿಗೆ ನೆರವಾದರು. ಹಝ್ರತ್ ಅಬೂಬಕರ್(ರ)ರನ್ನು ಎರಡು ಬಟ್ಟೆಗಳಿಂದ ಕಫನ್ ಮಾಡಲಾಗಿತ್ತು. ಅದರಲ್ಲಿ ಒಂದು ಬಟ್ಟೆ ಸ್ನಾನಕ್ಕಾಗಿ ಉಪಯೋಗಿಸಲಾಗಿತ್ತು. ಮೂರು ಬಟ್ಟೆಗಳಿಂದ ಕಫನ್ ಹೊದಿಸಲಾಯಿತು ಎಂದೂ ವರದಿಯಲ್ಲಿ ಬಂದಿದೆ. ಅನಂತರ ಅವರ ಮೃತದೇಹವನ್ನು ಹಝ್ರತ್ ಪೈಗಂಬರ್(ಸ)ರ ಮಂಚದಲ್ಲಿ ಇರಿಸಲಾಯಿತು. ಅದು ಆಯಿಶ(ರ) ಮಲಗುತ್ತಿದ್ದ ಮಂಚವಾಗಿತ್ತು. ಅದೇ ಮಂಚದಲ್ಲೇ ಅವರ ಜನಾಝವನ್ನು ಎತ್ತಲಾಯಿತು. ಹಝ್ರತ್ ಪೈಗಂಬರ್(ಸ)ರ ಖಬರ್ ಮತ್ತು ಮಿಂಬರಿನ ನಡುವೆ ನಿಂತುಕೊಂಡು ಹಝ್ರತ್ ಉಮರ್(ರ) ಹಝ್ರತ್ ಅಬೂಬಕರ್(ರ)ರ ಜನಾಝ ನಿರ್ವಹಿಸಿದರು. ಅವರನ್ನು ರಾತ್ರಿ ಸಮಯದಲ್ಲಿ ಅದೇ ಕೊಠಡಿಯಲ್ಲಿ ಹಝ್ರತ್ ಪೈಗಂಬರ್(ಸ)ರ ಖಬರಿನ ಸಮೀಪ ದಫನ್ ಮಾಡಲಾಯಿತು. ಅವರ ತಲೆಯನ್ನು ಹಝ್ರತ್ ಪೈಗಂಬರ್(ಸ)ರ ಹೆಗಲಿಗೆ ಸಮವಾಗಿ ಇರಿಸಲಾಯಿತು. ದಫನ್ ಸಮಯದಲ್ಲಿ ಹಝ್ರತ್ ಉಮರ್ ಬಿನ್ ಖತ್ತಾಬ್(ರ), ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ), ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್ ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಅಬೂಬಕರ್(ರ) ಖಬರಿಗೆ ಇಳಿದರು ಮತ್ತು ದಫನ್ ಮಾಡಿದರು.

ಹಝ್ರತ್ ಅಬೂಬಕರ್(ರ)ರಿಗೆ ನಾಲ್ವರು ಪತ್ನಿಯರು ಇದ್ದರು. ಖುತೀಲ ಬಿನ್ತ್ ಅಬ್ದುಲ್‌ಉಝ್ಝಾ (ಅವರು ಹಝ್ರತ್ ಅಬ್ದುಲ್ಲಾಹ್(ರ) ಮತ್ತು ಹಝ್ರತ್ ಅಸ್ಮಾ(ರ)ರ ತಾಯಿಯಾಗಿದ್ದರು.), ಹಝ್ರತ್ ಉಮ್ಮೇ ರೂಮಾನ್ ಬಿನ್ತ್ ಆಮಿರ್(ರ) (ಅವರು ಹಝ್ರತ್ ಅಬ್ದುರ್ರಹ್ಮಾನ್(ರ) ಮತ್ತು ಹಝ್ರತ್ ಆಯಿಶ(ರ)ರ ತಾಯಿಯಾಗಿದ್ದರು.), ಹಝ್ರತ್ ಅಸ್ಮಾ ಬಿನ್ತ್ ಉಮೈಸ್(ರ) (ಅವರು ಮುಹಮ್ಮದ್ ಬಿನ್ ಅಬೂಬಕರ್(ರ) ತಾಯಿಯಾಗಿದ್ದರು.), ಮತ್ತು ಹಝ್ರತ್ ಹಬೀಬ ಬಿನ್ತ್ ಖಾರಿಜ(ರ) (ಅವರು ಹಝ್ರತ್ ಅಬೂಬಕರ್(ರ)ರ ನಿಧನದ ಸ್ವಲ್ಪ ಕಾಲದ ನಂತರ ಜನಿಸಿದ ಉಮ್ಮೇ ಕುಲ್ಸುಮ್‌ರ ತಾಯಿಯಾಗಿದ್ದರು).

ಹಝ್ರತ್ ಅಬೂಬಕರ್(ರ)ರಿಗೆ ಏನಾದರೂ ವಿಷಯದ ಬಗ್ಗೆ ಸಲಹೆಗಾರರ ಅಭಿಪ್ರಾಯಗಳ ಅಗತ್ಯ ಬಂದರೆ, ಅವರು ಮುಹಾಜಿರರ ಕೆಲವು ಆಯ್ದ ಸಹಾಬಿಯರನ್ನು ಕರೆಯುತ್ತಿದ್ದರು ಅಥವಾ ಕೆಲವೊಮ್ಮೆ ಹೆಚ್ಚಿನ ಸಂಖ್ಯೆಯಲ್ಲಿ ಮುಹಾಜಿರ್ ಮತ್ತು ಅನ್ಸಾರ್‌ರನ್ನು ಒಟ್ಟು ಸೇರಿಸುತ್ತಿದ್ದರು. ಶ್ರೇಷ್ಠ ಸಹಾಬಿಯರ ಸಲಹೆ ಪ್ರಕಾರ ಒಂದು ಮನೆಯನ್ನು ಅವರು ಬೈತುಲ್ ಮಾಲ್ ಎಂಬ ಹೆಸರಿನಲ್ಲಿ ನಿಗದಿಪಡಿಸಿದ್ದರು. ಹಝ್ರತ್ ಅಬೂಬಕರ್(ರ) ಖಲೀಫರಾಗಿ ಆಯ್ಕೆಗೊಂಡಾಗ ಅವರ ಆವಶ್ಯಕತೆಗಳ ಏರ್ಪಾಡನ್ನು ಕೂಡ ಬೈತುಲ್ ಮಾಲಿನಿಂದ ಮಾಡಲಾಯಿತು. ಹೀಗೆ ವಾರ್ಷಿಕ ಮೂರು ಸಾವಿರ ದಿರ್ಹಂ ಅಥವಾ ಅವರ ಪೂರ್ತಿ ಖಿಲಾಫತ್ ಕಾಲಾವಧಿಯಲ್ಲಿ 6 ಸಾವಿರ ದಿರ್ಹಂ ನೀಡಲಾಗಿತ್ತು. ತನ್ನ ಖರ್ಚುವೆಚ್ಚಗಳಿಗೆ ಬೇಕಾದ ಹಣವನ್ನು ಪ್ರಜೆಗಳಿಂದ ಮಂಜೂರಾತಿ ಮಾಡಿಸಿದ ಮೊದಲ ಅಧಿಕಾರಿಯಾಗಿದ್ದರು ಹಝ್ರತ್ ಅಬೂಬಕರ್(ರ). ಚರಿತ್ರೆ ಗ್ರಂಥಗಳಲ್ಲಿ ಏಕಾಭಿಪ್ರಾಯದೊಂದಿಗೆ ಬರೆಯಲಾಗಿರುವ ಒಂದು ಸಂಗತಿಯೇನೆಂದರೆ, ಹಝ್ರತ್ ಅಬೂಬಕರ್(ರ) ಬೈತುಲ್ ಮಾಲಿನಿಂದ ತನ್ನ ಮತ್ತು ತನ್ನ ಕುಟುಂಬದ ಆವಶ್ಯಕತೆಗಳನ್ನು ಪೂರೈಸಲು ಪಡೆದಿದ್ದ ಎಲ್ಲ ಹಣವನ್ನು ನಿಧನದ ಸಮಯದಲ್ಲಿ ಅವರು ಮರಳಿ ನೀಡಿದರು. ನ್ಯಾಯಾಲಯವನ್ನು ಮತ್ತು ಸಾಮಾನ್ಯ ಮುಸ್ಲಿಮರ ಸೌಕರ್ಯಕ್ಕಾಗಿ ಕರ್ಮಶಾಸ್ತ್ರ ವಿಭಾಗವನ್ನು ಹಝ್ರತ್ ಅಬೂಬಕರ್(ರ) ಸ್ಥಾಪಿಸಿದ್ದರು. ಅವರ ಖಿಲಾಫತ್ ಕಾಲದಲ್ಲಿ ನ್ಯಾಯ ಸಭೆಯ ವ್ಯವಸ್ಥೆ ಸ್ಥಾಪನೆಗೊಂಡಿರಲಿಲ್ಲ. ಆದರೆ ಸರ್ಕಾರಿ ಆದೇಶಗಳನ್ನು ಮತ್ತು ಒಪ್ಪಂದಗಳನ್ನು ಬರೆಯಲು ಮತ್ತು ಇತರ ಲಿಖಿತ ಕೆಲಸಗಳಿಗಾಗಿ ಕೆಲವು ವ್ಯಕ್ತಿಗಳನ್ನು ನೇಮಿಸಲಾಗಿತ್ತು. ತನ್ನ ಸ್ವಂತ ಖರ್ಚುವೆಚ್ಚಗಳಿಗೆ ಬೇಕಾದ ಹಣವನ್ನು ಪ್ರಜೆಗಳಿಂದ

ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ನಿಖರವಾದ ಸೇನಾ ವ್ಯವಸ್ಥೆ ಇದ್ದಿರಲಿಲ್ಲ. ಯುದ್ಧದ ವೇಳೆ ಪ್ರತಿಯೊಬ್ಬ ಮುಸ್ಲಿಮನು ಯೋಧನಾಗುತ್ತಿದ್ದನು. ಸೇನೆಯ ವಿಂಗಡನೆ ಗೋತ್ರಗಳ ಪ್ರಕಾರ ನಡೆಯುತ್ತಿತ್ತು. ಪ್ರತಿಯೊಂದು ಗೋತ್ರಕ್ಕೆ ಬೇರೆ ಬೇರೆ ನೇತಾರ ಇರುತ್ತಿದ್ದರು. ಈ ಎಲ್ಲರ ಮೇಲೆ ಸರ್ವಸೇನಾಧಿಪತಿಯ ಹುದ್ದೆ ಇತ್ತು. ಅದನ್ನು ಹಝ್ರತ್ ಅಬೂಬಕರ್(ರ) ನೇಮಕ ಮಾಡುತ್ತಿದ್ದರು. ಯುದ್ಧಕ್ಕಾಗಿ ಹೋಗುವ ಸೇನಾಧಿಪತಿಗಳಿಗೆ ಮತ್ತು ಕಮಾಂಡರ್‌ಗಳಿಗೆ ನಿರ್ದೇಶನಗಳನ್ನು ಸಹ ಅವರು ನೀಡುತ್ತಿದ್ದರು. (ಈ ಸಂಬಂಧವಾಗಿ ಹಝ್ರತ್ ಉಸಾಮ(ರ)ರ ಸೈನ್ಯವನ್ನು ಸಂಬೋಧಿಸಿ ಮಾಡಿದ ವಿವೇಕಯುತ ಉಪದೇಶಗಳನ್ನು ಹುಝೂರ್ ಪ್ರಸ್ತಾಪಿಸಿದರು. ಅದೇ ರೀತಿಯಲ್ಲಿ ಹಝ್ರತ್ ಯಝೀದ್ ಬಿನ್ ಅಬೂಸುಫ್‌ಯಾನ್(ರ)ರನ್ನು ಸಿರಿಯ ಯುದ್ಧಕ್ಕಾಗಿ ಕಳುಹಿಸುವಾಗ ಹಝ್ರತ್ ಅಬೂಬಕರ್(ರ) ನೀಡಿದ ಅಮೂಲ್ಯ ಉಪದೇಶಗಳ ಬಗ್ಗೆ ನೆನಪಿಸುತ್ತಾ ಹುಝೂರ್ ಹೇಳಿದರು:) ನಾನು ಇದರ ಬಗ್ಗೆ ಹಿಂದಿನ ಒಂದು ಖುತ್ಬದಲ್ಲಿ ಪ್ರಸ್ತಾಪಿಸಿಯಾಗಿದೆ. ಕೆಲವು ಮುಖ್ಯ ಸಂಗತಿಗಳ ಸಾರಾಂಶವನ್ನು ಪುನಃ ಹೇಳುತ್ತೇನೆ. ಇದು ಬಹಳ ಮುಖ್ಯ ಮತ್ತು ಪ್ರತಿಯೊಬ್ಬ ಹುದ್ದೇದಾರನು ನೆನಪಿನಲ್ಲಿಡಬೇಕಾದ ಸಂಗತಿಗಳಾಗಿವೆ. ಇದರಿಂದ ಕೆಲಸಗಳಲ್ಲಿ ಅನುಗ್ರಹ ಉಂಟಾಗುವುದು.

ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನ ಭಕ್ತಿಯನ್ನು (ತಖ್‌ವಾ) ಕೈಗೊಳ್ಳಿರಿ. ಅವನು ನಿಮ್ಮ ಬಾಹ್ಯವನ್ನು ನೋಡುವ ಹಾಗೆಯೇ ಅಂತರಂಗವನ್ನು ನೋಡುತ್ತಾನೆ. ತನ್ನ ಸತ್ಕರ್ಮಗಳ ಮೂಲಕ ಅಲ್ಲಾಹನ ಸಾಮೀಪ್ಯವನ್ನು ಗಳಿಸುವ ವ್ಯಕ್ತಿಯು ಅಲ್ಲಾಹನಿಗೆ ಜನರಲ್ಲಿ ಅತ್ಯಂತ ಪ್ರಿಯನಾದವನು ಆಗಿರುತ್ತಾನೆ. ಅಜ್ಞಾನ ಮತ್ತು ಪಕ್ಷಪಾತದಿಂದ ದೂರವಿರಿ. ಅಲ್ಲಾಹನಿಗೆ ಈ ಸಂಗತಿಗಳು ತೀರಾ ಇಷ್ಟವಲ್ಲ. ನೀವು ನಿಮ್ಮ ಸೈನ್ಯದೊಂದಿಗೆ ಉತ್ತಮವಾಗಿ ಮತ್ತು

ಒಳಿತಿನಿಂದ ವರ್ತಿಸಿರಿ. ಅವರನ್ನು ಉಪದೇಶಿಸುವಾಗ ಸಂಕ್ಷಿಪ್ತವಾಗಿ ಉಪದೇಶಿಸಿರಿ. ಏಕೆಂದರೆ ಬಹಳವಾಗಿ ಮಾತನಾಡುವುದರಿಂದ ಅನೇಕ ಮಾತುಗಳು ಮರೆತು ಹೋಗುತ್ತವೆ. ನೀವು ನಿಮ್ಮನ್ನು ಸ್ವತಃ ಸರಿಯಾಗಿರಿಸಿದರೆ, ಜನರು ಸ್ವತಃ ಸರಿಯಾಗುವರು. ನಮಾಝನ್ನು ಅದರ ಸರಿಯಾದ ಸಮಯದಲ್ಲಿ ರುಕೂಅ್ ಮತ್ತು ಸುಜೂದನ್ನು ಸರಿಯಾಗಿ ಮಾಡುತ್ತಾ ನಿರ್ವಹಿಸಿರಿ. ಶತ್ರುಗಳ ರಾಯಭಾರಿ ನಿಮ್ಮ ಬಳಿಗೆ ಬಂದರೆ ಅವರನ್ನು ಗೌರವಿಸಿರಿ. ಅವರನ್ನು ಕನಿಷ್ಠ ಸಮಯ ತಂಗಲು ಬಿಡಿರಿ. ಅವರಿಗೆ ನಿಮ್ಮ ಕೆಲಸಗಳ ಬಗ್ಗೆ ತಿಳಿಸಿಕೊಡಬೇಡಿರಿ. ಅವರ ಜೊತೆಗೆ ಮಾತನಾಡುವುದರಿಂದ ನಿಮ್ಮ ಜನರನ್ನು ತಡೆಯಿರಿ. ಯಾರಿಂದಾದರೂ ಸಲಹೆ ಪಡೆಯುವುದಾದರೆ, ಅವರಿಗೆ ಎಲ್ಲ ಸಂಗತಿಗಳನ್ನು ಹೇಳಿಕೊಂಡು ಸಲಹೆ ಪಡೆಯಬೇಕು. ಸಲಹೆಗಾರನಿಂದ ತನ್ನ ರಹಸ್ಯಗಳನ್ನು ಬಚ್ಚಿಡಬೇಡಿರಿ. ಇಲ್ಲದಿದ್ದರೆ ನಿಮ್ಮಿಂದಲೇ ನಿಮಗೆ ನಷ್ಟ ಉಂಟಾಗುವುದು. ರಾತ್ರಿ ಸಮಯದಲ್ಲಿ ತನ್ನ ಗೆಳೆಯರೊಡನೆ ಮಾತನಾಡಿರಿ. ಸಾಯಂಕಾಲ ಸಮಯದಲ್ಲಿ ಕುಳಿತುಕೊಂಡು ಅವರಲ್ಲಿ ಆಯ್ದ ಜನರೊಂದಿಗೆ ಮಾತನಾಡಿರಿ. ಇದರಿಂದ ನಿಮಗೆ ಅನೇಕ ಮಾಹಿತಿಗಳು ಲಭಿಸುವುವು. ಹೆಚ್ಚಿನ ವೇಳೆ ಮಾಹಿತಿ ನೀಡದೇ ಅಚಾನಕ್ಕಾಗಿ ಅವರ ಸೇನಾ ತಾಣಗಳ ಅವಲೋಕನ ನಡೆಸಬೇಕು. ಮೇಲ್ನೋಟವಹಿಸುವುದು ಕೂಡ ಅಗತ್ಯ. ಯಾರನ್ನು ತನ್ನ ಸುರಕ್ಷಾ ತಾಣದಲ್ಲಿ ಅಸಡ್ಡೆಯಿಂದ ಕಾಣುವಿಯೋ ಅವರನ್ನು ಸರಿಯಾಗಿ ಶಿಕ್ಷಿಸಬೇಕು. ಶಿಕ್ಷೆ ನೀಡುವುದರಲ್ಲಿ ಅವಸರಪಡಲೂ ಬಾರದು ಪೂರ್ಣವಾಗಿ ಅಸಡ್ಡೆ ತೋರಿಸಲೂ ಬಾರದು. ತನ್ನ ಸೈನ್ಯದ ಬಗ್ಗೆ ಗಮನ ಹರಿಸದೇ ಇರಬೇಡ. ಸದಾ ಹುಡುಕಾಟ ನಡೆಸಬಾರದು. ಗುಟ್ಟಿನಲ್ಲಿ ಜನರ ಶೋಧನೆ ನಡೆಸಬಾರದು. ಏಕೆಂದರೆ, ಅದರಿಂದ ಅವರ ಅವಮಾನವಾಗುತ್ತದೆ. ನಿಮಗೆ ತಿಳಿದುಬರುವ ಅವರ ರಹಸ್ಯ ಸಂಗತಿಗಳನ್ನು ಬೇರೆ ಯಾರೊಡನೆಯೂ ಹೇಳಬೇಡಿರಿ. ವ್ಯರ್ಥವಾದ ಜನರ ಜೊತೆಗೆ ಕುಳಿತುಕೊಳ್ಳಬೇಡಿರಿ. ಸತ್ಯ ಮತ್ತು ಪ್ರಾಮಾಣಿಕ ಜನರೊಡನೆ ಕುಳಿತುಕೊಳ್ಳಬೇಕು. ಅಂಜುಬುರುಕರಾಗಬೇಡಿರಿ, ಇದರಿಂದ ಜನರು ಕೂಡ ಹೇಡಿಯಾಗುವರು. ಯುದ್ಧ ಸಂಪತ್ತಿನಲ್ಲಿ ಮೋಸಗಾರಿಕೆ ಮಾಡಬೇಡಿರಿ. ಅದು ಬಡತನವನ್ನು ಸಮೀಪಗೊಳಿಸುವುದು ಹಾಗೂ ವಿಜಯ ಮತ್ತು ದೈವಿಕ ಸಹಾಯವನ್ನು ತಡೆಯುವುದು.

ನಾನು ಪ್ರಸ್ತಾಪಿಸಿದ ಈ ಸಂಗತಿಗಳಲ್ಲಿ ಕೆಲವು ಹೊಸತು ಕೂಡ ಇವೆ. ಇವುಗಳಲ್ಲಿ ಕೆಲವು ಸಂಗತಿಗಳು ಸೇನಾಧಿಪತಿಗಳಿಗೆ ಮಾತ್ರವಲ್ಲ, ನಮ್ಮ ಹುದ್ದೇದಾರರಿಗೂ ಅವಶ್ಯ. ಅವುಗಳ ಬಗ್ಗೆ ಗಮನಹರಿಸಬೇಕು. ಆಗಲೇ ಕೆಲಸದಲ್ಲಿ ಅನುಗ್ರಹ ಉಂಟಾಗುವುದು.

ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಇಸ್ಲಾಮಿಕ ರಾಷ್ಟ್ರವನ್ನು ಬೇರೆ ಬೇರೆ ರಾಜ್ಯಗಳಾಗಿ ವಿಂಗಡಿಸಲಾಯಿತು. ಅವುಗಳಲ್ಲಿ ಅವರು ಅಧಿಕಾರಿಗಳನ್ನು ಮತ್ತು ಗವರ್ನರ್‌ಗಳನ್ನು ನೇಮಿಸಿದರು. ಮದೀನ ಅವುಗಳ ರಾಜಧಾನಿಯಾಗಿತ್ತು. ಅದರಲ್ಲಿ ಹಝ್ರತ್ ಅಬೂಬಕರ್(ರ) ಖಲೀಫರೆಂಬ ನೆಲೆಯಲ್ಲಿ ಇದ್ದರು. ಯಾವುದಾದರೂ ಸಮುದಾಯಕ್ಕಾಗಿ ಗವರ್ನರ್‌ಗಳನ್ನು ನೇಮಿಸುವಾಗ, ಹಝ್ರತ್ ಪೈಗಂಬರ್(ಸ)ರ ಚರ್ಯೆಯ ಪ್ರಕಾರ ಆ ಸಮುದಾಯದಲ್ಲಿ ಒಳ್ಳೆಯ ಮತ್ತು ಸಾತ್ವಿಕ ವ್ಯಕ್ತಿಗಳು ಇದ್ದರೆ ಅವರಿಂದಲೇ ಗವರ್ನರ್‌ಗಳನ್ನು ನೇಮಿಸುತ್ತಿದ್ದರು. ಅಧಿಕಾರಿಗಳನ್ನು ಆಯ್ಕೆ ಮಾಡುವಾಗ ಅವರಲ್ಲಿ ಯಾರು ಮೊದಲು ಇಸ್ಲಾಂ ಸ್ವೀಕಾರ ಮಾಡಿದ್ದರು ಎಂಬುದನ್ನು ಪರಿಗಣಿಸಲಾಗುತ್ತಿತ್ತು. ಮಾತ್ರವಲ್ಲ, ಹಝ್ರತ್ ಪೈಗಂಬರ್(ಸ)ರಿಂದ ತರಬೇತಿ ಪಡೆದವರನ್ನು ನೇಮಿಸಲಾಗುತ್ತಿತ್ತು. ಗೋತ್ರಗಳೊಂದಿಗೆ ಪಕ್ಷಪಾತ, ಅಥವಾ ಕುಟುಂಬ ಸಂಬಂಧದ ಆಧಾರದಲ್ಲಿ ಅಧಿಕಾರವನ್ನು ಕೊಡುವ ರೀತಿ ಎಂದಿಗೂ ಇರಲಿಲ್ಲ. ಈ ಕಠಿಣವಾದ ತತ್ವಗಳು ಮತ್ತು ಉನ್ನತ ಮಟ್ಟದ ಕಾರಣದಿಂದಲೇ ಹಝ್ರತ್ ಅಬೂಬಕರ್(ರ) ನೇಮಿಸಿದ ಹುದ್ದೇದಾರರು ಮತ್ತು ಅಧಿಕಾರಿಗಳು ಸದಾ ತಮ್ಮ ಅತ್ಯುತ್ತಮ ಸಾಮರ್ಥ್ಯಗಳನ್ನು ಇಸ್ಲಾಂ ಮತ್ತು ಮುಸ್ಲಿಮರ ಸೇವೆಗಾಗಿ ಉಪಯೋಗಿಸಿದರು. ಈ ಪ್ರಸ್ತಾಪ ಮುಂದುವರೆಯುವುದು ಇನ್‌ಶಾ ಅಲ್ಲಾಹ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

Friday Sermon delivered by Hadrath Khaleefatul Masih Al Khamis(atba)

At, Masjid Mubarak, Islamabad, Tilford, UK, on 09-09-2022

Summarized by *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

Reviewed by**:* M.P Ibrahim |Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

Email: *khutuba.kannada@gmail.com*

You can find all the Sermons archived at: www.alislam.org/friday-sermon